ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ **(**ಆರ್**.**ಪಿ**.**ಸಂಖ್ಯೆ **57)** ನಮೂನೆ ಸಂಖ್ಯೆ **4 (**ಸಿವಿಲ್**)** |

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ**.**ಎಂ**.**ಎಫ್**.**ಸಿ ನ್ಯಾಯಾಲಯ**,** ಹೊಸಕೋಟೆ
ಇವರ ನ್ಯಾಯಾಲಯದಲ್ಲಿ

**ಸಿ.ಸಿ.ನಂಬರ್ 540-2016**

ಪಿ.ಡಬ್ಲು-5.
ಸಿ.ಡಬ್ಲು-7.

ಹೆಸರು : ಶ್ರೀ ರಾಮಯ್ಯ
ತಂದೆ ಹೆಸರು : ಪೂಜಪ್ಪ
ವಯಸ್ಸು : 58
ಉದ್ಯೋಗ : ಕೂಲಿ ಕೆಲಸ
ವಾಸ ಸ್ಥಳ : ನಾರಾಯಣ ಕೆರೆ

ದಿ: 09.06.2026 ರಂದು ಸತ್ಯ ಪ್ರತಿಜ್ಞೆ ಮೇಲೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ**:** ಸಹಾಯಕ ಸರ್ಕಾರಿ ಅಭಿಯೋಜಕರಿಂದ

ಚಾ.ಸಾ.1 ರಿಂದ 6 ರವರ ಪರಿಚಯವಿದೆ. ಆರೋಪಿಯ ಪರಿಚಯವಿದೆ.

ಈಗ ನನಗೆ ತೋರಿಸಿದ ನಿಪಿ.2 ರಲ್ಲಿರುವ ಸಹಿ ನನ್ನದು. ಸದರಿ ದಾಖಲೆಗೆ ಸುಮಾರು ಹತ್ತು ವರ್ಷಗಳ ಹಿಂದೆ ಅನುಗೊಂಡನ ಹಳ್ಳಿ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯು ಯಾವುದರ ಕುರಿತು ಮತ್ತು ಅದರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ. ಚಾ.ಸಾ.1 ರವರು ನನ್ನ ಸಮಕ್ಷಮ ಯಾವುದೇ ಹಲ್ಲೆ ಜಾಗವನ್ನು ತೋರಿಸಿರುವುದಿಲ್ಲ ಮತ್ತು ಪೋಲಿಸರು ನನ್ನ ಸಮಕ್ಷಮ ಯಾವುದೇ ಹಲ್ಲೆ ಜಾಗದ ಮಹಜಾರನ್ನು ಜರುಗಿಸಿ ಯಾವುದೇ ವಸ್ತುಗಳನ್ನು ಸ್ವಾ ಧೀನ ಪಡೆಸಿಕೊಂಡಿರುವುದಿಲ್ಲ. ಈ ದಿನ ನ್ಯಾಯಾಲದ ಮುಂದಿರುವ ಮುಮಾ.1 ದೊಣ್ಣೆಯನ್ನು ಈ ಹಿಂದೆ ನೋಡಿರುವುದಿಲ್ಲ. ನಿಪಿ.2 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು.

**( ಈ ಹಂತದಲ್ಲಿ ಸಸಅ ರವರ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಅನುಮತಿ ನೀಡಲಾಯಿತು.)**

<u>ಪಾಟೀ ಸವಾಲು</u>**:** ಸಹಾಯಕ ಸರ್ಕಾರಿ ಅಭಿಯೋಜಕರಿಂದ **.**

ದಿ: 06.01.2016 ರಂದು ಬೆಳಿಗ್ಗೆ 8.30 ಗಂಟೆ ಸಮಯದಲ್ಲಿ ಹೊಸಕೋಟೆ ತಾಲ್ಲೂಕಿನ ನಾರಾಯಣ ಕೆರೆ ಗ್ರಾಮದ ಚಾ.ಸಾ.4 ರವರ ಅಂಗಡಿಯ ಮುಂಭಾಗದ ರತ್ನಮ್ಮರವರ ಮನೆಯ ಮುಂದಿನ ರಸ್ತೆಯಲ್ಲಿ ಸಂಭವಿಸಿದ ಹಲ್ಲೆ ಜಗಳದ ಕುರಿತು ಮಹಜರ್ ಜರುಗಿಸುವ ಸಲುವಾಗಿ ನನ್ನನ್ನು ಪಂಚರನಾಗಿ ಬರಮಾಡಿಕೊಳ್ಳಲಾಗಿತ್ತು ಎಂದರೆ ಸರಿಯಲ್ಲ. ದಿಃ06.01.2016 ರಂದು ನಾನು ಹಲ್ಲೆ ಜಾಗಕ್ಕೆ ಭೇಟಿ ನೀಡಿದ್ದು ಅಲ್ಲಿ ಚಾ.ಸಾ.1 ರವರು ಹಾಜರಿದ್ದು ಸ್ಥಳ ತೋರಿಸಿದಂತೆ ನನ್ನ ಸಮಕ್ಷಮ ನನ್ನ ಮತ್ತು ಚಾ.ಸಾ.5 ಹಾಗೂ 6 ರವರ ಸಮಕ್ಷಮ ಮಧ್ಯಹ್ನಾ 3 ರಿಂದ 3.30 ಗಂಟೆಯ ವರೆಗೆ ನಿಪಿ.2 ರಂತೆ ಮಹಜರನ್ನು ಜರುಗಿಸಿ ಆರೋಪಿಯು ಹಲ್ಲೆಗೆ ಬಳಸಿದ್ದ ಮುಮಾ.1 ದೊಣ್ಣೆಯನ್ನು ಸ್ವಾ ಧೀನ ಪಡಿಸಿಕೊಳ್ಳಲಾಗಿತ್ತು ಎಂದರೆ ಸರಿಯಲ್ಲ. ಸದರಿ ನಿಪಿ.2 ಮಹಜರಿಗೆ ನಾನು ಓದಿ ತಿಳಿದುಕೊಂಡು ನಿಪಿ.2(ಸಿ) ರಂತೆ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು**:** ಆರೋಪಿ ಪರ ಶ್ರೀಯುತ ಎಂ.ಆರ್**.** ವಕೀಲರಿಂದ**:** ಏನು ಇಲ್ಲ

<u>ಮರುವಿಚಾರಣೆ**:-**ಇಲ್ಲ**-**</u>
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.